**Code No. 10 X(D)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು — ಪ್ರಥಮ ದರ್ಜೆ — ಪ್ರಥಮ ಪತ್ರಿಕೆ

ಜನವರಿ / ಫೆಬ್ರವರಿ, 2020

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.
2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.
3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಒಬ್ಬ ಗೃಹಸ್ಥ ಹೆಚ್ಚಾಗಿ ದೇವರಿಗೆ ಪೂಜೆ ಮಾಡುವುದರೊಂದಿಗೆ ಪ್ರತಿದಿನ ಮನೆಯ ಪೂಜಾ ಗೃಹದಲ್ಲಿದ್ದ ಗ್ರಂಥವನ್ನು ಪೂಜಿಸುತ್ತಿದ್ದರು. ಗ್ರಂಥವೇ ತಮ್ಮನ್ನು ಕಾಪಾಡುತ್ತದೆಂದು ನಂಬಿರುವ ಅವರು, ಅದನ್ನು ಪೂಜಿಸದಿದ್ದರೆ ಕೇಡಾಗುತ್ತದೆಂದು ಹೆದರುತ್ತಿದ್ದರು. ಒಮ್ಮೆ ಇಲಿಯೊಂದು ಗ್ರಂಥವನ್ನು ಕಚ್ಚಿ ತಿನ್ನುತ್ತಿರುವುದನ್ನು ಕಂಡು ಅವರು ಗುರುಗಳ ಬಳಿ ಹೋಗಿ ಇಲಿಯಿಂದ ತಿಂದ ಗ್ರಂಥ ನಮ್ಮನ್ನು ಕಾಪಾಡುತ್ತದೆಯೇ ಎಂದರು. ನೀನು ಇನ್ನು ಮುಂದೆ ಇಲಿಯನ್ನೇ ಪೂಜಿಸೆಂದು ಗುರುಗಳು ಹೇಳಿದರು. ಅವರು ಇಲಿಯ ಫೋಟೋವನ್ನು ಪೂಜಿಸಬೇಕೆಂದು ಕುಳಿತರು. ಅಲ್ಲಿಗೆ ಬಂದ ಬೆಕ್ಕಿನ ಬಾಯಲ್ಲಿ ಇಲಿಯನ್ನು ಕಂಡು ಇಲಿಗಿಂತ ಬೆಕ್ಕೇ ಶಕ್ತಿಶಾಲಿಯಾದರೆ ಅದನ್ನೇ ಪೂಜಿಸಬೇಕೆಂದು ಅವರು ಬೆಕ್ಕಿನ ಫೋಟೋದ ಪೂಜೆಗೆ ಪ್ರಾರಂಭಿಸಿದರು. ಆ ದಿನ ಬೆಕ್ಕನ್ನು ನಾಯಿಗಳು ಅಟ್ಟಸಿ ಸಾಯಿಸಿರುವ ದೃಶ್ಯ ನೋಡಿದರು. ಅವರಿಗೆ ಬೆಕ್ಕಿಗಿಂತ ಶಕ್ತಿಶಾಲಿ ನಾಯಿಯೆಂದು ಅವರು ನಾಯಿಯನ್ನು ಪೂಜಿಸಲು ಶುರು ಮಾಡಿದರು.

ಮರುದಿನ ಮನೆಯ ಅಂಗಳದಲ್ಲಿ ಒಣಗಲು ಹಾಕಿದ್ದ ಮೀನನ್ನು ನಾಯಿ ತಿನ್ನುತ್ತಿದ್ದನ್ನು ಕಂಡ ಗೃಹಸ್ಥರ ಹೆಂಡತಿಗೆ ಸಿಕ್ಕಾಪಟ್ಟೆ ಕೋಪ ಬಂದು ಆಕೆ ದೊಣ್ಣೆಯಿಂದ ನಾಯಿಗೆ ಹೊಡೆದ ರಭಸಕ್ಕೆ ಆ ನಾಯಿ ಸತ್ತೇ ಹೋಯಿತು. ಗೃಹಸ್ಥರು ತಕ್ಷಣ ಗುರುಗಳ ಬಳಿಗೆ ಧಾವಿಸಿ, ಗ್ರಂಥಕ್ಕಿಂತ ಇಲಿ ಶಕ್ತಿಶಾಲಿಯೆಂದು, ಇಲಿಗಿಂತ



[ Turn over

ಬೆಕ್ಕು ಶಕ್ತಿಶಾಲಿಯೆಂದು, ಬೆಕ್ಕಿಗಿಂತ ನಾಯಿ ಶಕ್ತಿಶಾಲಿಯೆಂದು ಪೂಜಿಸಿದೆ. ಆದರೆ ನಾಯಿಯನ್ನು ಒಂದೇ ಏಟಿಗೆ ನನ್ನ ಪತ್ನಿ ಸಾಯಿಸಿ ಬಿಟ್ಟಳು. ಈಗೇನು ಮಾಡಲಿ ಎಂದಾಗ ಗುರುಗಳು ಗಟ್ಟಿಯಾಗಿ ನಕ್ಕು ಗ್ರಂಥ, ಇಲಿ, ಬೆಕ್ಕು, ನಾಯಿಗಳನ್ನು ಶಕ್ತಿಶಾಲಿಗಳೆಂದು ಹೆದರಿ ಪೂಜಿಸಿದಿರಿ. ಅವೆಲ್ಲಕ್ಕಿಂತ ನಿನ್ನ ಪತ್ನಿಯೇ ಶಕ್ತಿಶಾಲಿಯಾದರೆ, ಅವರನ್ನೇ ಪೂಜಿಸು ಎಂದರು.

ಮರುದಿನ ಗುರುಗಳ ಬಳಿಗೆ ಗೃಹಸ್ಥರ ಪತ್ನಿ ಓಡಿ ಬಂದು ನನ್ನ ಪತಿ ಇಲಿಗೆ, ಬೆಕ್ಕಿಗೆ, ನಾಯಿಗೆ ಪೂಜೆ ಮಾಡಿ ಅವೆಲ್ಲವೂ ಸತ್ತು ಹೋದ ಕಾರಣ ನನ್ನ ಫೋಟೋಗೆ ಪೂಜೆ ಮಾಡಬೇಕೆಂದಿದ್ದಾರೆ. ಬಹುಶಃ ನಾನು ಸತ್ತು ಹೋಗಲೆಂಬ ದುರಾಲೋಚನೆ ಇರಬೇಕು ಎನ್ನುತ್ತಾ ಗಟ್ಟಿಯಾಗಿ ಅಳಲು ಶುರುಮಾಡಿದರು. ಅಂತಹ ದುರಾಲೋಚನೆ ಇಲ್ಲವೆಂದು ಗೃಹಸ್ಥರು ಎಷ್ಟು ಹೇಳಿದರೂ ಕೇಳದೇ ಸಿಟ್ಟಾದ ಅವರು ರೌದ್ರಾವತಾರ ತಾಳಿ ಪತ್ನಿಯ ಕಪಾಳಕ್ಕೆ ಒಂದೇಟು ಕೊಟ್ಟರು. ಎಂದೂ ಗಂಡನ ಸಿಟ್ಟನ್ನು ಕಾಣದಿದ್ದ ಪತ್ನಿ ನಡುಗುತ್ತಾ ನಿಂತುಬಿಟ್ಟರು. ಆಗ ಗುರುಗಳು ಗೃಹಸ್ಥರೇ, ನೋಡಿದಿರಾ, ಗ್ರಂಥಕ್ಕಿಂತ, ಇಲಿಗಿಂತ, ಬೆಕ್ಕಿಗಿಂತ, ನಾಯಿಗಿಂತ, ನಿಮ್ಮ ಪತ್ನಿಗಿಂತ ನೀವೇ ಶಕ್ತಿಶಾಲಿ. ಇನ್ನು ಮುಂದೆ ನೀವು ದೇವರ ವಿನಹ ಯಾರಿಗೂ ಹೆದರಿ ಪೂಜೆ ಮಾಡಬೇಕಾಗಿಲ್ಲ ಎಂದರು. ತಮ್ಮ ಅಪಾರ ಶಕ್ತಿಯ ಅರಿವಾದ ಗೃಹಸ್ಥರು ದೇವರ ಪೂಜೆಯನ್ನು ಮಾಡುತ್ತಾ ಕಾಲ ಕಳೆದರು.